ತೆರೆಯ ಮೇಲೆ ಕಾಣಿಸುವ ಹಿಂಸೆಯ ಮೂಲಕ ಅವನು ಮನುಷ್ಯನ ಮೂಲಸ್ವಭಾವಗಳ ಶೋಧನೆಗೆ ತೊಡಗುತ್ತಾನೆ. ತೆರೆಯ ಮೇಲೆ ತೋರಿಸುವ ಹಿಂಸೆಯೇ ಡುಕ್‌ನಿಗೆ ಅಂತಿಮ ತಂಗುದಾಣವಲ್ಲ, ಬದಲಿಗೆ ಅದು ನಿಜದ ತಂಗುದಾಣಕ್ಕೆ ಜಿಗಿಯಲು ಬಳಸಿಕೊಳ್ಳುವ ಮೀಟುಗೋಲು. ಅದರ ಮೂಲಕ ಅವನು ಬೇರೆಯದೇ ಏನನ್ನೋ ಹೇಳುತ್ತಿರುತ್ತಾನೆ.

ಡುಕ್‌ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ತಂದುಕೊಟ್ಟ ಸಿನಿಮಾ 'ದಿ ಐಲ್', ಅವನ ಹಿಂಸಾಪ್ರೀತಿಯ ಉಚ್ಛ್ರಾಯ ಮಾದರಿಯೂ ಹೌದು. ಮೀನು ಹಿಡಿಯುವ ಗಾಳವನ್ನು ಜನನಾಂಗ, ಗಂಟಲುಗಳಲ್ಲಿ ತೂರಿಸಿಕೊಳ್ಳುವಂಥ ಭೀಕರ ದೃಶ್ಯಗಳಿರುವ ಈ ಸಿನಿಮಾ ಪ್ರಶಂಸೆಯಷ್ಟೇ ಟೀಕೆಗಳನ್ನೂ ಎದುರಿಸಬೇಕಾಯ್ತು. ಆದರೆ ಇದಕ್ಕೆ ಪೂರ್ತಿ ವಿರುದ್ಧವಾಗಿರುವಂಥ – 'ದಿ ಐಲ್'ನಂಥ ಸಿನಿಮಾಗಳನ್ನು ಮಾಡಿದ ನಿರ್ದೇಶಕನೇ ಇಂಥ ಸಿನಿಮಾವನ್ನೂ ಮಾಡಲು ಸಾಧ್ಯವೇ ಎಂದು ಅಚ್ಚರಿಪಡುವಂಥ– ಸಿನಿಮಾವನ್ನೂ ಡುಕ್ ಮಾಡಿದ್ದಾರೆ. 'ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್... ಆ್ಯಂಡ್ ಸ್ಪ್ರಿಂಗ್' ಇನ್ನೊಂದು ಮಾದರಿಯ ಸಿನಿಮಾ ಅಷ್ಟೇ ಅಲ್ಲ, ಅವನ ಒಟ್ಟಾರೆ ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳುವ ಹೊಸ ದಾರಿಯನ್ನು ತೆರೆದಿಡುವ ಸಿನಿಮಾ ಕೂಡ ಹೌದು.

ಡುಕ್‌ನ ಸಿನಿಮಾಗಳನ್ನು ಪ್ರತ್ಯೇಕವಾಗಿ ನೋಡಿದಾಗ ಮತ್ತು ಒಟ್ಟಾರೆಯಾಗಿ ನೋಡಿದಾಗ ಸಿಗುವ ಅನುಭವ ಬೇರೆಯದೇ ಬಗೆಯದ್ದು. ಅವನ ಚಿತ್ರಗಳ ನಡುವಿನ ಅಂತರ್‌ಸಂಬಂಧದ ಗ್ರಹಿಕೆ ಹಲವು ಹೊಸ ಹೊಳಹುಗಳನ್ನು ನೀಡುತ್ತದೆ. ಒಂದು ಸಿನಿಮಾ ನೋಡಬೇಕಾದ ಕ್ರಮದ ಕೀಲಿಕೈ ಇನ್ನೊಂದು ಸಿನಿಮಾದಲ್ಲಿ ಇರುತ್ತದೆ. ಒಂದರಲ್ಲಿ ಎತ್ತಿಕೊಂಡ ಪ್ರಶ್ನೆಗೆ ಇನ್ನೊಂದು ಸಿನಿಮಾದಲ್ಲಿ ಇನ್ನೊಂದು ಬಗೆಯಲ್ಲಿ ಮುಖಾಮುಖಿಯಾಗುತ್ತಾನೆ. 'ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್... ಆ್ಯಂಡ್ ಸ್ಪ್ರಿಂಗ್' ಇಂಥ ಹಲವು 'ನೋಟ'ಗಳ ಕೀಲಿಕೈಗಳನ್ನು ತನ್ನೊಳಗೆ ಇರಿಸಿಕೊಂಡಿರುವ ಸಿನಿಮಾ. ಈ ಚಿತ್ರದಲ್ಲಿಯೂ ಅವನು ಹಿಂಸೆ ಮತ್ತು ಲೈಂಗಿಕತೆಯನ್ನು ತ್ಯಜಿಸಿಲ್ಲ. ಆದರೆ ಅದನ್ನು ಪರಿಭಾವಿಸುವ ರೀತಿ ಅವನದೇ ಉಳಿದ ಸಿನಿಮಾಗಳಿಗಿಂತ ತುಂಬ ಭಿನ್ನವಾಗಿದೆ. ಆದ್ದರಿಂದಲೇ ಇದನ್ನು ಕಿಮ್ ಕಿ ಡುಕ್‌ನ ಮಾಸ್ಟರ್ ಪೀಸ್ ಎಂದೇ ಕರೆಯಲಾಗುತ್ತದೆ.

ಒಂದು ಚಿತ್ರವನ್ನು ಬಹುಮುಖ್ಯವಾಗಿ ಎರಡು ಬಗೆಗಳಲ್ಲಿ ನೋಡಬಹುದು. ತೆರೆಯ ಮೇಲೆ ಜರುಗುತ್ತಿರುವ ಕಥನದ ಜತೆಗೆ ಸಾಗುವುದು ಒಂದು 'ನೋಟ'ವಾದರೆ, ಕಾಣುವ ಕಥೆಯಾಚೆಗಿನ ಕಾಣ್ಕೆಗಳನ್ನು ದಕ್ಕಿಸಿಕೊಳ್ಳುತ್ತ ಹೋಗುವುದು ಇನ್ನೊಂದು ನೋಟ. ಈ ಎರಡೂ ಬೇರೆ ಬೇರೆ ದಾರಿಗಳಲ್ಲ. ಅವು ಮನುಷ್ಯನ ಎರಡು ಕಣ್ಣುಗಳಿದ್ದಂತೆ. ಎರಡೂ ಕಣ್ಣುಗಳ ನೋಟ ಸಂಧಿಸುವ ಬಿಂದುವಿನಲ್ಲಿಯೇ 'ನಿಜ'ವಾದದ್ದು ಕಾಣುವುದು. 'ಸ್ಪ್ರಿಂಗ್, ಸಮ್ಮರ್, ಫಾಲ್, ವಿಂಟರ್... ಆ್ಯಂಡ್ ಸ್ಪ್ರಿಂಗ್' ಈ 'ಕಥನ' ಮತ್ತು 'ಕಾಣ್ಕೆ' ಎರಡನ್ನೂ ಸಮೃದ್ಧವಾಗಿ ಹೊಂದಿರುವ ಸಿನಿಮಾ.

ಈ ಸಿನಿಮಾ ಆರಂಭವಾಗುವುದೇ ತೆರೆದುಕೊಳ್ಳುವ ಬಾಗಿಲ ಮೂಲಕ. ಅದೊಂದು ದಟ್ಟ ಕಾಡು. ಸುತ್ತ ಕೈಕಟ್ಟಿಕೊಂಡು ನಿಂತ ಪರ್ವತಗಳ ನಟ್ಟನಡುವಲ್ಲಿ ಒಂದು ಸರೋವರ. ಆ ಸರೋವರದ ನಡುವೆ ಒಂದು ತೇಲುವ ಮನೆ. ಅದಕ್ಕೆ ಆತು ನಿಂತಿರುವ ಮರದ ದೋಣಿ. ಆ ಸರೋವರಕ್ಕೂ ಒಂದು ಬಾಗಿಲಿದೆ. ಮನೆಯಿಂದ ದೋಣಿಯಲ್ಲಿ ಸರೋವರದ ದಡಕ್ಕೆ ಬಂದು ಬೆಟ್ಟದ ದಾರಿ ಏರಿ ಹೊರಟರೆ ಅಲ್ಲಿ ಬಂಡೆಗಲ್ಲುಗಳ ನಡುವೆ ಒಂದು ಪುಟಾಣಿ ಕೊಳ. ಆ